ಬಿದ್ದುಕೊಂಡಿದ್ದವು. ಅವರ ಕಣ್ಣುಗಳಿಗೆ ಮತ್ತೆ ದೃಷ್ಟಿ ಬರತೊಡಗಿದಾಗ, ಅವರು ಚರ್ಮದ ಸೋಫಾಸೆಟ್ಟನ್ನು, ಬೀಟೆ ಮರದಿಂದ ನಿರ್ಮಿಸಿದ ಕುರ್ಚಿಗಳನ್ನು, ಗೋಡೆಯಲ್ಲಿ ತೂಗು ಹಾಕಿರುವ ಕ್ರಿಸ್ತನ ತೈಲವರ್ಣದ ಚಿತ್ರವನ್ನು ಕಂಡರು. ಬಟ್ಟೆಯಿಂದ ಮಾಡಿದ ಬಿಳಿಯ ಗುಲಾಬಿ ಹೂಗಳು ತುಂಬಿಸಿದ ಒಂದು ತಾಮ್ರದ ಪಾತ್ರೆ ಕೋಣೆಯ ಮೂಲೆಯೊಂದರಲ್ಲಿ ಮೂರು ಕಾಲಿನ ಮೇಜಿನ ಮೇಲೆ ಕಾಣಿಸಿತು. ಮರ ಪಾಲಿಷ್ ಮಾಡಲು ಉಪಯೋಗಿಸುವ ಫ್ರೆಂಚ್ ಪಾಲಿಷಿನ ಮತ್ತು ಉರಿದು ಮುಗಿದ ಮೇಣದ ಬತ್ತಿಯ ವಾಸನೆ ಆ ಕೋಣೆಯಲ್ಲಿ ತಂಗಿ ನಿಂತಿತ್ತು.

ಗಾಳಿಬೀಸುವಾಗ ಕಟ್ಟಡದ ಹಿಂದಿನ ಸ್ಥಳದಿಂದ ತುರ್ಕಿಕೋಳಿಗಳು, ವೃದ್ಧೆಯರು ಪರಸ್ಪರ ಕುಶಲಾನ್ವೇಷಣೆ ನಡೆಸುವಂತೆ, ಸದ್ದು ಮಾಡುತ್ತಲೂ ರೆಕ್ಕೆ ಬಡಿಯುತ್ತಲೂ ಇದ್ದವು.

'ಅವು ತುರ್ಕಿಕೋಳಿಗಳು' ಗಂಡ ಹೇಳಿದ.

'ನೀವು ಬೆಲ್ ಮಾಡಲಿಲ್ವಾ? ಇಲ್ಲಿ ಯಾರೂ ಕಾಣಿಸ್ತಿಲ್ಲವಲ್ಲ' ಹೆಂಡತಿ ಹೇಳಿದಳು.

'ನಾನು ಬೆಲ್ ಒತ್ತುವುದನ್ನು ನೀನು ನೋಡಲಿಲ್ವಾ ಲೀಲಾ?' ಆತ ಕೇಳಿದ.

ಹೊರಗಿದ್ದ ಹದಿನೈದರ ಹೆಣ್ಮಗಳೊಬ್ಬಳು ಆ ದಂಪತಿಯನ್ನು ನೋಡಿ, 'ಯಾರನ್ನು ನೋಡಬೇಕಿತ್ತು?' ಎಂದು ಕೇಳಿದಳು.

'ಶಿಶು ಕ್ಲಾಸಿನಲ್ಲಿರುವ ಮೋಹನ ಮೇನೋನಿನ ತಂದೆ ನಾನು. ಈಕೆ ನನ್ನ ಪತ್ನಿ' ಮೇನೋನ್ ಹೇಳಿದ.

'ಸರಿ, ನಾನು ಮದರ್‌ಗೆ ಹೇಳ್ತಿನಿ' ಅನಾಥ ಬಾಲಕಿಯರಲ್ಲಿ ಒಬ್ಬಳಾದ ಆ ಹೆಣ್ಣುಮಗಳು ಬಿಳಿಯ ಹಿಂಗಾಲುಗಳನ್ನು ಮತ್ತು ಕಪ್ಪು ಪಾದಗಳನ್ನು ಪ್ರದರ್ಶಿಸುತ್ತಾ ಓಡಿ ಹೋಗಿ ಮರೆಯಾದಳು.

ಮಗುವನ್ನು ನೋಡಲು ಕೊನೆಗೂ ಅವನ ಅಪ್ಪ ಬಂದಿದ್ದಾರೆ ಎಂದು ಕೇಳಿಸಿಕೊಂಡಾಗ, ಮದರ್ ಸುಪೀರಿಯರ್ ಯಾವುದೇ ಆತುರವನ್ನು ತೋರಿಸದೆ ಮೊದಲು ಬಚ್ಚಲುಮನೆಗೆ ಹೋದರು. ಮಗುವನ್ನು ಬೋರ್ಡಿಂಗ್‌ನಲ್ಲಿ ಸೇರಿಸಿದ ನಂತರ, ಪ್ರತಿತಿಂಗಳು ಒಂದು ಚೆಕ್ ಬರುತ್ತಿದ್ದುದಲ್ಲದೆ, ಮಗುವಿನ ತಂದೆ ಅವನೊಂದಿಗೆ ಯಾವುದೇ ಸಂಬಂಧವನ್ನು ಬೆಳೆಸಿರಲಿಲ್ಲ. ಅಮ್ಮನ ಸಾವಿನ ದುಃಖದ ಕಣ್ಣೀರು ಬತ್ತುವ ಮೊದಲೇ ಐದು ವರ್ಷ ವಯಸ್ಸಿನ ಮೋಹನ ಬೋರ್ಡಿಂಗ್‌ನ ನಿವಾಸಿಯಾಗಿದ್ದ. ಅದರ ನಂತರ ಅಪ್ಪ ಒಂದು ಪತ್ರವನ್ನೂ ಮಗನಿಗೆ ಬರೆಯಲಿಲ್ಲ. ರಜಾದಿನಗಳಲ್ಲಿ ಮಗನನ್ನು ಮನೆಗೆ ಕರೆದೊಯ್ಯುವ ಶ್ರಮವನ್ನೂ ಮೇನೋನ್ ಮಾಡಲಿಲ್ಲ. ಅಂತಹ ಅಪ್ಪನನ್ನು ಬರಮಾಡಿಕೊಳ್ಳಲು ತಾನೇಕೆ ವಿಶೇಷ ಆಸಕ್ತಿ ತೋರಬೇಕು?



ಮದರ್ ತನ್ನ ಮುಖವನ್ನು ತಣ್ಣೀರು ಚಿಮುಕಿಸಿ ತೊಳೆದುಕೊಂಡರು. ಆನಂತರ ಭಾರವಾದ ಲಂಗದ ನಿರಿಗೆಗಳನ್ನು ಒಟ್ಟುಗೂಡಿಸಿ ಏಣಿಮೆಟ್ಟಿಲುಗಳನ್ನಿಳಿದರು. ಸೊಂಟದಲ್ಲಿ ತೂಗಾಡುತ್ತಿರುವ ಜಪಮಾಲೆ ಮತ್ತು ಕುತ್ತಿಗೆಗೆ ನೇತು ಹಾಕಿರುವ ಶಿಲುಬೆ ಮೆದುವಾದ ನಾದವನ್ನು ಹೊರಹೊಮ್ಮಿಸುತ್ತಿತ್ತು... ಮೇಲ್ತುಟಿಯಲ್ಲಿ ಕೂದಲಿರುವ ವೃದ್ಧೆಯಾಗಿದ್ದರು ಮದರ್ ಫಿಲೋಮಿನ.

ದಿವಾನಖಾನೆಯ ಹಿಂದಿರುವ ಉದ್ದನೆಯ ಒಳದಾರಿಯಲ್ಲಿ ಸಿಸ್ಟರ್ ಯುಫ್ರೇಸ್ಯಾ ಹಿತ್ತಾಳೆ ಪಾತ್ರೆಗಳನ್ನು ಉಜ್ಜಿ ಬೆಳಗುತ್ತಿದ್ದರು.

'ಸಿಸ್ಟರ್, ಮೋಹನನ್ನು ಶಿಶುಕ್ಲಾಸಿನಿಂದ ಕರೆದುಕೊಂಡು ಬನ್ನಿ. ಅವನ ಅಪ್ಪ ಮಗನನ್ನು ನೋಡಲು ಬಂದಿದ್ದಾರೆ.'

ಮದರ್ ದಿವಾನಾಖಾನೆಯನ್ನು ಪ್ರವೇಶಿಸಿದಾಗ ಸೋಫಾದಲ್ಲಿ ಅಂಟಿಕೊಂಡು ಕುಳಿತಿದ್ದ ಮೇನೋನ್ ಮತ್ತು ಪತ್ನಿ ಗಾಬರಿಯಿಂದ ಎದ್ದು ನಿಂತರು.

'ಗುಡ್ ಮಾರ್ನಿಂಗ್ ಮದರ್, ಇವಳು ನನ್ನ ಹೆಂಡತಿ. ಹೆಸರು ಲೀಲಾ. ನಾವು ಕಳೆದ ವಾರ ಮದುವೆಯಾದ್ವಿ. ಮೋಹನನಿಗೆ ಅವನ ಹೊಸ ಅಮ್ಮನನ್ನು ಪರಿಚಯಿಸೋಣಾಂತ ಬಂದೆ. ನಾವೀಗ